# ಹೊಯ್ಸಳ ವಂಶ

ಮಾಹಿತಿ ಮೂಲ: ಮೈಸೂರು ವಿಶ್ವವಿದ್ಯಾನಿಲಯ ವಿಶ್ವಕೋಶ

ಹೊಯ್ಸಳ ವಂಶ - 11ನೆಯ ಶತಮಾನದ ಆದಿಭಾಗದಿಂದ 14ನೆಯ ಶತಮಾನದ ಮಧ್ಯಭಾಗದ ವರೆಗೆ, ವಿಶೇಷವಾಗಿ ದಕ್ಷಿಣ ಕರ್ನಾಟಕ ಮತ್ತು ಸುತ್ತಲಿನ ಭಾಗಗಳನ್ನು ಆಳಿದ ರಾಜಮನೆತನ. ಈ ವಂಶದ ಅರಸರ ರಾಜಧಾನಿ ಮೊದಲು ಶಶಕಪುರ ಅಥವಾ ಸೊಸೆವೂರು (ಚಿಕ್ಕಮಗಳೂರು ಜಿಲ್ಲೆ, ಮೂಡಿಗೆರೆ ತಾಲ್ಲೂಕಿನ ಅಂಗಡಿ), ಅನಂತರ ಬೇಲೂರು ಮತ್ತು ದೋರಸಮುದ್ರ (ಹಾಸನ ಜಿಲ್ಲೆ). ಮಲೆನಾಡಿನ ಒಂದು ಚಿಕ್ಕ ಪಾಳೆಯಪಟ್ಟಾಗಿ ಆರಂಭವಾಗಿ, ತತ್ಕಾಲೀನ ಅಸ್ತವ್ಯಸ್ತ ರಾಜಕೀಯ ಪರಿಸ್ಥಿತಿಯ ಲಾಭಪಡೆದು, ಮೊದಲು ಕಲ್ಯಾಣ ಚಾಳುಕ್ಯರ ಸಾಮಂತರಾಗಿ ನೆಲೆಗೊಂಡು, ಮುಂದೆ ಶೌರ್ಯ ಹಾಗೂ ಸ್ವಸಾಮರ್ಥ್ಯದಿಂದ ರಾಜ್ಯವಿಸ್ತಾರಮಾಡಿ, ಸ್ವತಂತ್ರರಾಗಿ, ಸುಸಂದರ್ಭದಲ್ಲಿ ತಮ್ಮ ಪ್ರಭಾವವನ್ನು ತಮಿಳುನಾಡಿಗೂ ವಿಸ್ತರಿಸಿ, ನಾಡಿನ ಆರ್ಥಿಕ ಸಾಂಸ್ಕøತಿಕ ರಂಗಗಳಲ್ಲಿ ಉನ್ನತ ಸಾಧನೆಗಳಿಗೆ ಪ್ರೋತ್ಸಾಹ ನೀಡಿ, ಸುಮಾರು ಮೂರು ಶತಮಾನಗಳಿಗೂ ಹೆಚ್ಚು ಕಾಲ ವೈಭವೋಪೇತವಾಗಿ ಮೆರೆದ ಈ ರಾಜವಂಶದ ಇತಿಹಾಸ ಕರ್ನಾಟಕ ಇತಿಹಾಸದ ಒಂದು ಮುಖ್ಯ ಅಧ್ಯಾಯ.

ರಾಜಕೀಯ ಇತಿಹಾಸ : ಹೊಯ್ಸಳರು ಯಾದವ ವಂಶದವರೆಂದೂ ಇವರ ಆದ್ಯನಾದ ಸಳ ಎಂಬವನು ತನ್ನ ಗುರುವಾದ ಜೈನಯತಿ ಸುದತ್ತಾಚಾರ್ಯನೊಡನೆ ಶಶಕಪುರದ ಬಳಿಯ ವಾಸಂತಿಕಾ ದೇವಾಲಯದಲ್ಲಿ ದೇವತೆಯ ಅರ್ಚನೆಯಲ್ಲಿ ತೊಡಗಿದ್ದಾಗ ಒಂದು ದಿನ ಹುಲಿಯೊಂದು ಅವರತ್ತ ಜಿಗಿದು ಬಂದಿತೆಂದೂ ಜೈನಮುನಿ ತನ್ನ ಕೈಯಲ್ಲಿದ್ದ ಕೋಲನ್ನು ಸಳನ ಕೈಗಿತ್ತು ಪೊಯ್ ಸಳ ಎಂದು ಅಪ್ಪಣೆ ಮಾಡಿದನೆಂದೂ ಸಳ ಧೈರ್ಯದಿಂದ ಹುಲಿಯನ್ನು ಕೊಂದನೆಂದೂ ಇದರಿಂದ ಸುಪ್ರೀತನಾದ ಮುನಿ ತನ್ನ ಶಿಷ್ಯ ರಾಜನಾಗುವಂತೆ ಸಳನನ್ನು ಹರಸಿದನೆಂದೂ ಆದ್ದರಿಂದಲೇ ಅವನ ವಂಶಕ್ಕೆ ಪೊಯ್ಸಳ ಎಂದು ಹೆಸರಾಯಿತೆಂದೂ ಹೊಯ್ಸಳರ ಶಾಸನಗಳು ತಿಳಿಸುತ್ತವೆ. ಆದರೆ ಈ ಕಥೆಗಳೆಲ್ಲ ಅನೇಕ ಮೂಲ ವ್ಯತ್ಯಾಸಗಳೊಡನೆ ಕೇವಲ 12 ಮತ್ತು ಅನಂತರದ ಶತಮಾನಗಳಲ್ಲಷ್ಟೇ ಕಂಡುಬರುವುದ ರಿಂದ ಇವೆಲ್ಲ ಹೊಯ್ಸಳರು ರಾಜ್ಯ ಸಾಧಿಸಿದ ಮೇಲೆ ಆ ವಂಶದ ಹೆಸರನ್ನು ವಿವರಿಸಲು ಹುಟ್ಟಿಕೊಂಡ ಕಟ್ಟುಕಥೆಗಳೆಂದು ಅನೇಕ ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಆದ್ಯನೆಂದು ಹೇಳುವ ಸಳ ಐತಿಹಾಸಿಕ ವ್ಯಕ್ತಿ ಎಂಬುದು ಸಹ ಅನುಮಾನಾಸ್ಪದ.

ಕರ್ನಾಟಕದಲ್ಲಿ ಚೋಳ ಪ್ರತಿನಿಧಿಯಾಗಿದ್ದ ಅಪ್ರಮೇಯ 1006ರಲ್ಲಿ ಹಾಕಿಸಿದ ಕಲಿಯೂರಿನ (ಮೈಸೂರು ಜಿಲ್ಲೆ, ತಿರುಮಕೂಡಲು ನರಸೀಪುರ ತಾಲ್ಲೂಕು) ಜಯಸ್ತಂಭ ಶಾಸನದಲ್ಲಿ ಹೊಯ್ಸಳ ಎಂಬ ಪದ ಮೊದಲಿಗೆ ದೊರಕುತ್ತದೆ. 1004ರ ಸುಮಾರಿನಲ್ಲಿ ಹಲವು ಶತಮಾನಗಳಿಂದ ದಕ್ಷಿಣ ಕರ್ನಾಟಕದ ಪ್ರಭುತ್ವವನ್ನು ಹೊಂದಿದ್ದ ಗಂಗವಂಶ ಚೋಳರಿಂದ ಮೂಲೋತ್ಪಾಟನವಾಯಿತು. ಅದರ ಜೊತೆಗೆ ಚೋಳರು ಹೊಸ ರಾಜನೀತಿಯನ್ನು ಅನುಸರಿಸಿ ತಾವು ಗೆದ್ದ ಪ್ರದೇಶಗಳನ್ನು ಪುನರ್ವಿಂಗಡಿಸಿ ತಮಿಳು ಹೆಸರುಗಳನ್ನಿಟ್ಟು, ಅಲ್ಲಿಗೆ ಚೋಳನಾಡಿನ ವ್ಯಕ್ತಿಗಳನ್ನೇ ಅಧಿಕಾರಕ್ಕೆ ನೇಮಿಸಿದ್ದರಿಂದ ಹಲವು ನಾಡುಗಳಲ್ಲಿ ಕಾಲಾಂತರದಿಂದ ವಂಶಪಾರಂಪರ್ಯವಾಗಿ ಅಧಿಕಾರ ದಲ್ಲಿದ್ದ ಸ್ಥಳೀಯ

ಚಿಕ್ಕಪುಟ್ಟ ಗಂಗಾಶ್ರಿತರೆಲ್ಲ ಮೂಲೆಗುಂಪಾದರು. ಅತ್ತ ಕರ್ನಾಟಕದ ಒಂದು ಮುಖ್ಯ ಶಕ್ತಿಯಾಗಿದ್ದ ರಾಷ್ಟ್ರಕೂಟ ವಂಶವೂ ಕೊನೆಗೊಂಡು, ಅನಂತರ ಬಂದ ಚಾಳುಕ್ಯರಾದರೂ ಆಗತಾನೇ ಅಧಿಕಾರಸ್ಥರಾಗಿದ್ದುದರಿಂದ ಶೂರ ಚೋಳ ದೊರೆಗಳಾದ ರಾಜರಾಜ ಮತ್ತು ರಾಜೇಂದ್ರರ ಮುನ್ನಡೆಯನ್ನು ತಡೆಯುವ ಶಕ್ತಿಯನ್ನು ಇನ್ನೂ ಸಾಧಿಸಿರಲಿಲ್ಲ. ಇಂತಹ ವಿಷಮಸ್ಥಿತಿಯಲ್ಲಿ ಖತಿಗೊಂಡ ಕರ್ನಾಟಕದ ಚಿಕ್ಕಪುಟ್ಟ ವಂಶೀಯರೆಲ್ಲ ಒಂದುಗೂಡಿ ಚೋಳರನ್ನು ಎದುರಿಸುವ ಸನ್ನಾಹ ನಡೆಸಿದರು. ಇಂಥ ಒಂದು ಪ್ರಯತ್ನದ ಉಲ್ಲೇಖ ಕಲಿಯೂರು ಶಾಸನದಲ್ಲಿ ದೊರಕುತ್ತದೆ. ಹೊಯ್ಸಳವಂಶೀಯನೊಬ್ಬ ಈ ಸಂದರ್ಭದಲ್ಲಿ ನೇತೃತ್ವವನ್ನು ವಹಿಸಿ, ಚೋಳರನ್ನು ಸೋಲಿಸುವುದರಲ್ಲಿ ಅಸಫಲನಾದರೂ ಅವರ ರಾಜ್ಯ ವಿಸ್ತರಣೆಯನ್ನು ತಡೆಗಟ್ಟಿರಬೇಕೆಂದು ತೋರುತ್ತದೆ.

ಹೊಯ್ಸಳರ ಶಾಸನಗಳಲ್ಲಿ ಆದ್ಯ ಸಳನಿಗೂ ಅಂಗಡಿಯ ವಾಸಂತಿಕಾದೇವಿಗೂ ಸಂಬಂಧವನ್ನು ಹೇಳಿರುವುದರಿಂದ ಮತ್ತು ಅತಿ ಪ್ರಾಚೀನ ಶಾಸನಗಳೆಲ್ಲ ಚಿಕ್ಕಮಗಳೂರು ಮತ್ತು ಹಾಸನ ಜಿಲ್ಲೆಗಳಲ್ಲೇ ದೊರೆಯುವುದರಿಂದ ಇವರು ಮೂಲತಃ ಮಲೆನಾಡಿನವರು ಎಂದು ಸುಲಭವಾಗಿ ಊಹಿಸಬಹುದು. ಮೊದಮೊದಲು ಅಲ್ಲಿದ್ದ ಇತರ ಸಣ್ಣ ರಾಜರ ಮೇಲೆ ವಿಜಯ ಗಳಿಸಿ ಇವರು ಪ್ರಸಿದ್ಧಿಗೆ ಬಂದಿರ ಬೇಕೆಂದು ಮಲೆವರ ಮಾರಿ, ಮಲೆಪರೊಳ್ ಗಂಡ ಮುಂತಾದ ಇವರ ಬಿರುದುಗಳು ತೋರಿಸುತ್ತವೆ.

ನೃಪಕಾಮ (ಸು. 1000-45) ನಿಸ್ಸಂದೇಹವಾಗಿ ತಿಳಿದಿರುವ ಹೊಯ್ಸಳವಂಶದ ಮೊದಲ ದೊರೆ. ಇವನಿಗೆ ರಾಚಮಲ್ಲ ಪೆರ್ಮಾನಡಿ, ರಕ್ಕಸಗಂಗ ಎಂಬ ಹೆಸರುಗಳೂ ಇದ್ದುದರಿಂದ ಈತ ತಲಕಾಡಿನ ಗಂಗವಂಶದೊಡನೆ ಸಂಬಂಧವನ್ನು ಹೊಂದಿರಬೇಕೆಂದು ತೋರುತ್ತದೆ. ಹಾಸನ ಜಿಲ್ಲೆ ಮತ್ತು ಸುತ್ತಲ ಪ್ರದೇಶಗಳು ಮಾತ್ರ ಇವನ ಆಳಿಕೆಗೆ ಒಳಪಟ್ಟಿರಬೇಕೆಂದು ಇವನ ಶಾಸನಗಳ ಸೀಮಿತ ವ್ಯಾಪ್ತಿಯಿಂದ ತಿಳಿಯಬಹುದು. ತನ್ನ ಕಾಲದಲ್ಲಿ ಚೋಳಾಶ್ರಿತರಾದ ಕೊಂಗಾಳ್ವರನ್ನು ಎದುರಿಸಿದ್ದಲ್ಲದೆ(1022, 1026) ಯಾವುದೋ ಸಂದರ್ಭದಲ್ಲಿ ಬನವಾಸಿಯ ಮೇಲೆ ನಡೆದ(1027) ದಾಳಿಯನ್ನು ಎದುರಿಸಲು ಅಲ್ಲಿಯ ಅರಸರಿಗೆ ಸಹಾಯ ಮಾಡಿದ. ಅಂದರೆ ಈ ಕಾಲದಲ್ಲಿ ಹೊಯ್ಸಳರ ಪ್ರಭಾವ ಏರುಗತಿಯಲ್ಲಿದ್ದಿತೆಂದು ಊಹಿಸಲು ಅವಕಾಶವಿದೆ.

ಮುಂದಿನ ದೊರೆ ವಿನಯಾದಿತ್ಯನಿಗೂ(ಸು.1045-98) ನೃಪಕಾಮ ನಿಗೂ ಸಂಬಂಧವೇನೆಂದು ಸ್ಪಷ್ಟವಾಗಿಲ್ಲ. ಆದರೆ ಅನಂತರದ ಕೆಲವು ಶಾಸನಗಳ ಆಧಾರದಿಂದ ಇವರು ತಂದೆ-ಮಕ್ಕಳಿರಬೇಕೆಂದು ಊಹಿಸುವ ಸಾಧ್ಯತೆ ಇದೆ. ಹೊಯ್ಸಳ ಶಾಸನಗಳಲ್ಲಿ ಹೆಚ್ಚಿನವು ಸಳನಾದ ಅನಂತರ ವಿನಯಾದಿತ್ಯನನ್ನೇ ವಂಶಾದ್ಯನಾಗಿ ವಿವರಿಸುತ್ತವೆಯಾದ್ದರಿಂದ ಪ್ರಾಯಃ ಇವನ ಕಾಲದಲ್ಲಿ ಹೊಯ್ಸಳ ರಾಜ್ಯ, ನೃಪಕಾಮನ ಪಾಳೆಯಗಾರಿಕೆ ಸ್ಥಿತಿಯನ್ನು ಮೀರಿ, ಮೊದಲಿಗೆ ಸ್ಪಷ್ಟ ರಾಜಕೀಯ ಘಟಕವಾಗಿ ರೂಪುಗೊಂಡಿರಬೇಕು. ವಿನಯಾದಿತ್ಯನ ಆಳಿಕೆ ಹಾಸನ, ಚಿಕ್ಕಮಗಳೂರು ಜಿಲ್ಲೆಗಳನ್ನೂ ಮೀರಿ ಸುತ್ತಣ ತುಮಕೂರು ಮತ್ತು ಮೈಸೂರು ಜಿಲ್ಲೆಗಳ ಭಾಗಗಳಿಗೂ ಹಬ್ಬಿದ್ದಿತು. ಒಂದು ಶಾಸನದ ಪ್ರಕಾರ ವಿನಯಾದಿತ್ಯನ ಕಾಲದಲ್ಲಿ ಹೊಯ್ಸಳ ರಾಜ್ಯಕ್ಕೆ ಕೊಂಕಣ, ಆಳ್ವಖೇಡ, ವೈನಾಡು ಮತ್ತು ತಲಕಾಡು ಗಡಿಪ್ರದೇಶಗಳಾಗಿದ್ದುವು. ಆಗಿನ ದಕ್ಷಿಣ ಭಾರತದ ಪ್ರಭಾವೀ ರಾಜಕೀಯ ಶಕ್ತಿಗಳಾಗಿದ್ದ ಚಾಳುಕ್ಯ ಮತ್ತು ಚೋಳ ರಾಜ್ಯಗಳ ನಡುವೆ ಇವನು

ಆಳಬೇಕಾಗಿದ್ದರಿಂದ ಈತ ತನ್ನ ನಡೆಯಲ್ಲಿ ಬಹಳ ಜಾಗರೂಕತೆಯನ್ನು ವಹಿಸಬೇಕಾಗಿತ್ತು. ಹಳೆಯ ಗಂಗವಾಡಿಯ ಭಾಗಗಳನ್ನು ಇವನು ಆಳುತ್ತಿದ್ದುದರಿಂದ ಸ್ಥಳೀಯರೊಡನೆ ಇವನ ಸಂಬಂಧ ನಿಕಟವಾಗಿದ್ದು ಚೋಳರೊಡನೆ ಸ್ನೇಹ ಬೆಳೆಸುವ ಸಾಧ್ಯತೆಯೇ ಇರಲಿಲ್ಲವಾಗಿ, ತನ್ನ ಅಧಿಕಾರ ಭದ್ರತೆಗಾಗಿ ಚಾಳುಕ್ಯರೊಡನೆ ರಕ್ತಸಂಬಂಧ ಮತ್ತು ರಾಜಕೀಯ ಬಾಂಧವ್ಯವನ್ನು ಬೆಳೆಸಿ, ಹೊಯ್ಸಳರ ಮೂಲೋದ್ದೇಶವಾದ ಚೋಳೋತ್ಪಾಟನೆಗಾಗಿ ಶಕ್ತಿ ಸಂಚಯ ಮಾಡಿಕೊಳ್ಳಲಾರಂಭಿಸಿದ. ಉದ್ದಿಶ್ಯ ಸ್ಪಷ್ಟವಾಗಿದ್ದರೂ ಇನ್ನೂ ತಾನಿದ್ದ ಅಬಲ ಸ್ಥಿತಿಯಲ್ಲಿ ಚೋಳರ ಮೇಲೆ ಬೀಳುವುದು ಅಪಾಯಕರವೆಂದು ವಿನಯಾದಿತ್ಯ ಅರಿತಿರಬೇಕು. ಇವನ ಅರ್ಧ ಶತಮಾನಕ್ಕೆ ಹೆಚ್ಚಿನ ಆಳಿಕೆಯಲ್ಲಿಯೂ ಅವರೊಡನೆ ನೇರವಾಗಿ ಸೆಣಸಿಲ್ಲದಿರುವುದಕ್ಕೆ ಇದೇ ಕಾರಣ. ಆದರೆ ಚಾಳುಕ್ಯ 2ನೆಯ ಸೋಮೇಶ್ವರ ಮತ್ತು 6ನೆಯ ವಿಕ್ರಮಾದಿತ್ಯರೊಡನೆ ಉತ್ತಮ ಬಾಂಧವ್ಯವನ್ನು ಸಾಧಿಸಿಕೊಂಡು ತನ್ನ ಮಗ ಎರೆಯಂಗನನ್ನೂ ಮೊಮ್ಮಕ್ಕಳಾದ ಒಂದನೆಯ ಬಲ್ಲಾಳ, ವಿಷ್ಣುವರ್ಧನರನ್ನೂ ಚಾಳುಕ್ಯರ ದಂಡಯಾತ್ರೆಗಳಲ್ಲಿ ಪಾಲ್ಗೊಳ್ಳುವಂತೆ ಮಾಡಿ, ಮೇಲ್ಮಟ್ಟದ ರಾಜಕೀಯ ಮತ್ತು ಯುದ್ಧತಂತ್ರಗಳಲ್ಲಿ ಅವರನ್ನು ನಿಷ್ಣಾತರಾಗುವಂತೆ ಮಾಡಿದ್ದಲ್ಲದೆ ಚಾಳುಕ್ಯರ ಬೆಂಬಲವನ್ನೂ ಗಳಿಸಿಕೊಂಡ. ಈ ರಾಜಕೀಯ ಮುತ್ಸದ್ದಿತನ ಮುಂದೆ ಹಲವೇ ವರ್ಷಗಳಲ್ಲಿ ಫಲ ನೀಡಿತು. ಚೋಳರ ಉಚ್ಚಾಟನೆ, ಹೊಯ್ಸಳರ ಬೃಹತ್ ಸಾಮ್ರಾಜ್ಯ ಸ್ಥಾಪನೆ ನೆರವೇರಿತು. ವಿನಯಾದಿತ್ಯನ ಅನಂತರ ಪಟ್ಟಕ್ಕೆ ಬಂದ ಅವನ ಮಗ ಎರೆಯಂಗನ ಆಳಿಕೆಯ ಕಾಲ (ಸು. 1098-1100) ಗಮನಾರ್ಹವಾದುದೇನಲ್ಲ. ಈ ಕಾಲಕ್ಕಾಗಲೇ ಇವನ ಮಕ್ಕಳಾದ ಒಂದನೆಯ ಬಲ್ಲಾಳ, ವಿಷ್ಣುವರ್ಧನರು ರಾಜಕೀಯ ಕ್ಷೇತ್ರದಲ್ಲಿ ಸಮರ್ಥರಾಗಿದ್ದರು.

ಒಂದನೆಯ ಬಲ್ಲಾಳನ (ಸು. 1100-08) ಕಾಲದಲ್ಲಿ ಹೊಯ್ಸಳ ಇತಿಹಾಸದಲ್ಲಿ ಒಂದು ಮುಖ್ಯ ತಿರುವು ಕಂಡುಬರುತ್ತದೆ. ಈ ಹಿಂದಿನ ದೊರೆಗಳಂತೆ ಈತನೂ ತ್ರಿಭುವನಮಲ್ಲ ಎಂಬ ಬಿರುದನ್ನು ಧರಿಸಿ ಚಾಳುಕ್ಯ ಸಾಮಂತತ್ವವನ್ನು ಒಪ್ಪಿಕೊಂಡಿದ್ದರೂ ಪ್ರಾಯಃ ಚಾಳುಕ್ಯ ವಿಕ್ರಮಾದಿತ್ಯನ ತಪ್ಪುನಡೆಯಿಂದಾಗಿ ಅವನ ಮಿತ್ರ ಸಾಮಂತ ಹೊಯ್ಸಳರ ಮೇಲೆರಗಿ ಬಂದು ಚಾಳುಕ್ಯ-ಹೊಯ್ಸಳ ಸಂಬಂಧವನ್ನು ಕಲಕಿದ. ಈ ಸಂದರ್ಭದಲ್ಲಿ ಶೌರ್ಯದಿಂದ ಹೋರಾಡಿ ವಿಜಯಿಗಳಾದ ಬಲ್ಲಾಳ-ವಿಷ್ಣುವರ್ಧನರಲ್ಲಿ ಹೊಸ ಧೈರ್ಯ, ಹುಮ್ಮಸ್ಸು ಬೆಳೆದುಬಂದು ಸುತ್ತಣ ಚೆಂಗಾಳ್ವ, ಆಳುಪ ರಾಜ್ಯಗಳನ್ನೇ ಅಲ್ಲದೆ ಚಾಳುಕ್ಯರ ಸಾಮಂತರಾದ ಉಚ್ಚಂಗಿ ಪಾಂಡ್ಯರ ಮೇಲೂ ಜಯಗಳಿಸಿದರು. ಇದು ಮಂಡಲೇಶ್ವರರಾಗಿದ್ದ ಹೊಯ್ಸಳರು ಸ್ವತಂತ್ರ ರಾಜ್ಯವನ್ನು ಸಾಧಿಸುವತ್ತ ಇಟ್ಟ ಮೊದಲ ಹೆಜ್ಜೆ ಎಂದು ಗುರುತಿಸಬಹುದು.

ವಿಷ್ಣುವರ್ಧನನ 34 ವರ್ಷಗಳ ಆಳಿಕೆ (ಸು. 1108-42) ಹೊಯ್ಸಳ ಇತಿಹಾಸದಲ್ಲಿ ಮಹತ್ತ್ವಪೂರ್ಣವಾದುದು. ಚಿಕ್ಕ ನಾಡಾಗಿದ್ದ ಹೊಯ್ಸಳ ರಾಜ್ಯ ಸಾಮ್ರಾಜ್ಯ ಪದವನ್ನು ರೂಢಿಸಿಕೊಂಡಿದ್ದು ಈ ಕಾಲದಲ್ಲಿ. ವಿಷ್ಣುವರ್ಧನ ತಾನು ಪಟ್ಟವೇರುವ ಮೊದಲೇ ತಂದೆ ಎರೆಯಂಗ ಮತ್ತು ಅಣ್ಣ ಬಲ್ಲಾಳರ ಕಾಲದಲ್ಲಿ ಯುದ್ಧ ಮತ್ತು ರಾಜ್ಯಾಡಳಿತದಲ್ಲಿ ಭಾಗಿಯಾಗಿದ್ದು ಅಪಾರ ಅನುಭವವನ್ನು ಸಾಧಿಸಿದ್ದ. ಇದರ ಪೂರ್ಣ ಉಪಯೋಗವನ್ನು ಪಡೆದುಕೊಂಡು, ಆ ಪ್ರದೇಶದ ಶೂರಯೋಧರನ್ನು ಕಲೆಹಾಕಿ, ಗಂಗವಾಡಿಯನ್ನು ಪರಕೀಯರ ಆಳಿಕೆಯಿಂದ ಮುಕ್ತಗೊಳಿಸಿ, ಹೊಯ್ಸಳ ರಾಜ್ಯವನ್ನು ಚಾಳುಕ್ಯಾಧೀನತ್ವದಿಂದ ಪಾರುಮಾಡುವ ಎರಡು ಗುರಿಗಳನ್ನಿಟ್ಟುಕೊಂಡು ಕಾರ್ಯಾರಂಭ ಮಾಡಿದ. ಚೋಳರೂ

ಚಾಳುಕ್ಯರೂ ಪ್ರಬಲ ಸಾಮ್ರಾಟರಾದ್ದರಿಂದ ಅವರನ್ನು ಮೊದಲು ಎದುರಿಸುವುದು ಆತ್ಮಘಾತಕವಾದೀತೆಂದು ಭಾವಿಸಿ, ತನ್ನ ರಾಜ್ಯಾಡಳಿತದ ಆರಂಭದಲ್ಲಿ ಮೊದಲಿಗೆ ರಾಜ್ಯದ ಸುತ್ತಲಿದ್ದ ಚಿಕ್ಕಪುಟ್ಟ ತುಂಡರಸರನ್ನು ಮೆಟ್ಟಿ ತನ್ನ ಸೈನ್ಯಬಲ ಹಾಗೂ ಕೋಶವನ್ನು ವೃದ್ಧಿಸಿಕೊಂಡ. ಈ ಕಾರ್ಯಾಚರಣೆಯಲ್ಲಿ ಚೆಂಗಾಳ್ವರೂ, ಕೊಂಗಾಳ್ವರೂ ಆಳುಪರೂ ಪ್ರಾಯಶಃ ಉಚ್ಚಂಗಿಯ ಪಾಂಡ್ಯರೂ ಪೆಟ್ಟು ತಿಂದರು. ಇವರುಗಳ ಮೇಲೆ ಗಳಿಸಿದ ಜಯ ವಿಷ್ಣುವರ್ಧನನಿಗೆ ಹೆಚ್ಚು ಕೆಚ್ಚನ್ನು ಒದಗಿಸಿತು. ಕುಲೋತ್ತುಂಗ ಚೋಳ ವೆಂಗಿಯ ರಾಜಕೀಯದಲ್ಲಿ ಮಗ್ನನಾಗಿದ್ದ ಸುಸಂದರ್ಭವನ್ನು ಉಪಯೋಗಿಸಿಕೊಂಡು ತಲಕಾಡಿನ ಮೇಲೆ ದಾಳಿ ಮಾಡಿ (1116) ಅಲ್ಲಿದ್ದ ಆದಿಯಮನೆಂಬ ಚೋಳಪ್ರತಿನಿಧಿಯನ್ನೂ ಇನ್ನಿತರ ಚೋಳಾಧಿಕಾರಿಗಳನ್ನೂ ಓಡಿಸಿ ತಲಕಾಡನ್ನು ವಶಪಡಿಸಿ ಕೊಂಡದ್ದೇ ಅಲ್ಲದೆ, ಅದೇ ಭರದಲ್ಲಿ ಅವರುಗಳನ್ನು ಅಟ್ಟಿಸಿಕೊಂಡು ಘಟ್ಟದ ಮೇಲೆ ಈಗಿನ ಕೋಲಾರ, ಬೆಂಗಳೂರು ಜಿಲ್ಲೆಯ ಪ್ರದೇಶಗಳೂ ಘಟ್ಟದ ಕೆಳಗಿನ ಕೊಯಮತ್ತೂರು, ಸೇಲಂ, ಧರ್ಮಪುರಿ, ಉತ್ತರ ಆರ್ಕಾಟು ಜಿಲ್ಲೆಗಳ ಭಾಗಗಳ ಮೇಲೂ ದಾಳಿಮಾಡಿ, ಪ್ರಾಯಶಃ ಕಾಂಚೀಪುರದವರೆಗೂ ಮುನ್ನಡೆದ. ಇದೇ ಹುರುಪಿನಲ್ಲೇ ಉಚ್ಚಂಗಿ ಪಾಂಡ್ಯರನ್ನೂ ಸೋಲಿಸಿದ. ಒಂದು ಚಿಕ್ಕ ಅಧೀನ ರಾಜ್ಯದ ಚಿಕ್ಕ ಅರಸೊಬ್ಬ ಬೃಹತ್ ಚೋಳ ಸಾಮ್ರಾಟನ ಮೇಲೆ ಜಯಗಳಿಸಿದುದು ನಿಜಕ್ಕೂ ಮಹತ್ತ್ವದ ಸಂಗತಿ. ಈ ಎಲ್ಲ ಸಾಧನೆಗಳಿಂದ 1117ರ ಒಂದು ಶಾಸನ ವಿವರಿಸುವಂತೆ ದಕ್ಷಿಣದಲ್ಲಿ ಚೇರಮನ ಮಲೆ, ಕೊಂಗು ವಿಷಯದಿಂದ ಹಿಡಿದು (ನೀಲಗಿರಿ, ಕೊಯಮತ್ತೂರು ಬಳಿಯ ಭಾಗಗಳು) ಉತ್ತರದಲ್ಲಿ ಸಾವಿಮಲೆಯ (ಬಳ್ಳಾರಿ ಜಿಲ್ಲೆ ಸಂಡೂರು) ವರೆಗೂ ಪೂರ್ವದಲ್ಲಿ ಸಂಗಲಿಘಟ್ಟದಿಂದ (ಕೋಲಾರ ಜಿಲ್ಲೆ ಮುಳಬಾಗಲು ನಂಗಲಿ) ಪಶ್ಚಿಮದಲ್ಲಿ ಬಾರಕನೂರು ಘಟ್ಟದ (ಸಹ್ಯಾದ್ರಿಯ ಪಶ್ಚಿಮ ಅಂಚು) ವರೆಗೂ ಹೊಯ್ಸಳ ರಾಜ್ಯ ವಿಸ್ತೃತವಾಯಿತು. ಹಿಂದೆ ಗಂಗರ ಅನೂಚಾನ ಆಧಿಪತ್ಯಕ್ಕೊಳಪಟ್ಟಿದ್ದ ರಾಜ್ಯವೆಲ್ಲ, ವಿಷ್ಣುವರ್ಧನನ ಏಕಚ್ಛತ್ರದಡಿಗೆ ಬಂದು, ಹೊಯ್ಸಳರು ಗಂಗವಾಡಿ 96000ದ ನಾಯಕರೆಂಬ ಹೇಳಿಕೆಯೂ ಇವನ ವೀರಗಂಗನೆಂಬ ಬಿರುದೂ ಸಫಲವಾದುವು. ಚಾಳುಕ್ಯ 6ನೆಯ ವಿಕ್ರಮಾದಿತ್ಯ ಮೊದಲಿಗೆ ತನ್ನ ಸಾಮಂತರಾಗಿದ್ದ ಈ ಹೊಯ್ಸಳರ ಏಳ್ಗೆಯನ್ನು ಗಮನಿಸುತ್ತಲೇ ಬಂದಿದ್ದ. ಅವನು ತನ್ನ ರಾಜ್ಯದ ದಕ್ಷಿಣದಲ್ಲಿ ಪ್ರಬಲವಾಗುತ್ತಿದ್ದುದಲ್ಲದೆ ಹಿಂದೆ ಉಂಟಾದ ಚಾಳುಕ್ಯ-ಹೊಯ್ಸಳ ವಿರಸದಿಂದ ಹೆಚ್ಚುಕಡಿಮೆ ಸ್ವತಂತ್ರರಂತೆಯೇ ವರ್ತಿಸುತ್ತ, ನಿಷ್ಠಾವಂತ ಚಾಳುಕ್ಯ ಸಾಮಂತರಾಗಿದ್ದ ಉಚ್ಚಂಗಿ ಪಾಂಡ್ಯರ ಮೇಲೂ ಹೊಯ್ಸಳರ ದಾಳಿ ನಡೆದದ್ದನ್ನು ಸಹಿಸಲಿಲ್ಲ. 1118ರಲ್ಲಿ ವಿಷ್ಣುವರ್ಧನನನ್ನು ಬಗ್ಗಿಸಲು ಬೃಹತ್ ಸೈನ್ಯವೊಂದನ್ನು ಕಳುಹಿಸಿದಾಗ ಹೊಯ್ಸಳ ದಂಡನಾಯಕರು ಶೌರ್ಯದಿಂದ ಎದುರಿಸಿ, ಚಾಳುಕ್ಯ ಬಲವನ್ನು ಹಿಮ್ಮೆಟ್ಟಿಸಿದರು. ಚಾಳುಕ್ಯ ಶೃಂಖಲೆ ಮುರಿಯಿತು. ಹೊಯ್ಸಳ ಸಾರ್ವಭೌಮತ್ವ ಸಿದ್ಧವಾಯಿತು. ಮುಂದಿನ ವರ್ಷಗಳಲ್ಲಿ ವಿಷ್ಣುವರ್ಧನ ತಾನು ಗಳಿಸಿದ ನಾಡಿನ ಸುವ್ಯವಸ್ಥೆಗೆ ಗಮನ ಕೊಟ್ಟುದಲ್ಲದೆ ಅವಕಾಶ ಒದಗಿದಾಗ ಚಾಳುಕ್ಯ ರಾಜ್ಯದ ಒಳಕ್ಕೂ ತನ್ನ ಆಧಿಪತ್ಯವನ್ನು ವಿಸ್ತರಿಸಲು ಯತ್ನಿಸಿದ. ಈ ಕೆಲಸ ಸುಲಭಸಾಧ್ಯವಾಗಿರಲಿಲ್ಲ. ಆತ ಪ್ರತಿ ಹೆಜ್ಜೆಯಲ್ಲೂ ಚಾಳುಕ್ಯರು ಮತ್ತು ಅವರ ನಿಷ್ಠ ಸಾಮಂತರೊಡನೆ ಸತತ ಹೋರಾಟ ನಡೆಸಬೇಕಾಯಿತು. 6ನೆಯ ವಿಕ್ರಮಾದಿತ್ಯನ ಅನಂತರ ಬಂದ ಭೂಲೋಕಮಲ್ಲ ಅಷ್ಟೇನೂ ಶಕ್ತನಾಗಿರಲಿಲ್ಲವಾಗಿ ಅವನ ರಾಜ್ಯದಲ್ಲೇ ಸ್ವಹಿತ ಸಾಧಕರು ಬೆಳೆದಿದ್ದು, ಸ್ವಲ್ಪಮಟ್ಟಿಗೆ ವಿಷಮ ಪರಿಸ್ಥಿತಿಯೂ ಇದ್ದಿತಾದ್ದರಿಂದ ವಿಷ್ಣುವರ್ಧನ ಹಲವು ಸಂದರ್ಭಗಳಲ್ಲಿ ಹಾನುಗಲ್ಲಿನ ಕದಂಬರು ಮುಂತಾದವರನ್ನು ಸೋಲಿಸಿ ಕೃಷ್ಣಾ

ನದಿಯ ವರೆಗೂ ಮುನ್ನಡೆದನಲ್ಲದೆ ತನ್ನ ಆಳಿಕೆಯ ಕೊನೆಯ ಘಟ್ಟದಲ್ಲಿ ಬೆಳ್ವೊಲ ಪ್ರಾಂತವನ್ನೆಲ್ಲ ಆಕ್ರಮಿಸಿ, ಬಂಕಾಪುರವನ್ನು ನೆಲೆವೀಡಾಗಿ ಮಾಡಿಕೊಂಡ. ಪ್ರಾಯಶಃ ಈ ಕಾಲದಲ್ಲಿ ದಕ್ಷಿಣದಲ್ಲಿದ್ದ ಚೋಳರೂ ಬಲಗುಂದಿದ್ದು, ಅತ್ತ ಕಡೆಯಿಂದ ಆಕ್ರಮಣ ಭಯವೂ ಇಲ್ಲದ್ದು, ಉತ್ತರದಲ್ಲಿ ಹೊಯ್ಸಳ ರಾಜ್ಯದ ವಿಸ್ತರಣೆಗೆ ಕಾರಣವಾಗಿರಬೇಕು. ವಿಷ್ಣುವರ್ಧನನ ಶೌರ್ಯ, ರಾಜಕೀಯ ಮುತ್ಸದ್ದಿತನ, ಇವನ ದಂಡನಾಯಕರು ಮತ್ತು ಸಾಮಂತರ ಅಚಲ ನಿಷ್ಠೆ-ಇವುಗಳಿಂದ ಹೊಯ್ಸಳರು ದಕ್ಷಿಣ ಭಾರತದ ರಾಜಕೀಯದ-ಚೋಳ-ಚಾಳುಕ್ಯರ ಜೊತೆಗೆ-ಇನ್ನೊಂದು ಮುಖ್ಯ ಬಲವಾಗಿ ನೆಲೆಗೊಂಡರು.

ವಿಷ್ಣುವರ್ಧನನ ಮರಣಾನಂತರ ಪಟ್ಟಕ್ಕೆ ಬಂದ ಅವನ ಮಗ ಒಂದನೆಯ ನರಸಿಂಹ (1142-73) ಇನ್ನೂ ಬಾಲಕನಾಗಿದ್ದುದರಿಂದಲೂ ಪ್ರಾಪ್ತವಯಸ್ಕನಾದಮೇಲೂ ಸ್ವಭಾವತಃ ಅಶಕ್ತನೂ ಸುಖಲೋಲುಪನೂ ಆಗಿದ್ದುದರಿಂದಲೂ ಚಾಳುಕ್ಯ ಜಗದೇಕಮಲ್ಲ ಮತ್ತು ಹಿಂದೆ ವಿಷ್ಣುವರ್ಧನನಿಂದ ಪೆಟ್ಟು ತಿಂದಿದ್ದ ಚಾಳುಕ್ಯ ಸಾಮಂತರು, ಹರಿಹರದಿಂದ ಉತ್ತರಕ್ಕಿದ್ದ ಹೊಯ್ಸಳರ ಗಳಿಕೆಯನ್ನೆಲ್ಲ ಕಬಳಿಸಿದರು. ಪೂರ್ವದಲ್ಲಿ ಚೋಳರೂ ಈಗಿನ ಕೋಲಾರ ಜಿಲ್ಲೆಯ ಸ್ವಲ್ಪಭಾಗವನ್ನು ಆಕ್ರಮಿಸಿದರು. ದಕ್ಷಿಣದಲ್ಲಿ ಚೆಂಗಾಳ್ವರು ಸಂದರ್ಭದ ಲಾಭಪಡೆಯಲು ಪ್ರಯತ್ನಿಸಿದರೂ ಅದು ಸಫಲವಾಗಲಿಲ್ಲವಾದರೂ ನರಸಿಂಹನ ಕಾಲದಲ್ಲಿ ತಂದೆಯ ಬಾಹುಬಲದಿಂದ ವೃದ್ಧಿಸಿದ್ದ ಹೊಯ್ಸಳ ರಾಜ್ಯ ಸಂಕುಚಿತ ವಾಯಿತು. ನರಸಿಂಹ ಚಾಳುಕ್ಯ ಸಾರ್ವಭೌಮತ್ವವನ್ನೂ ಒಪ್ಪಬೇಕಾಯಿತು. ಪ್ರಾಯಶಃ ಈ ವಿಷಮ ಸ್ಥಿತಿಯಲ್ಲಿ ಹೊಯ್ಸಳ ರಾಜ್ಯ ಛಿದ್ರವಾಗದಿದ್ದುದು ಕೆಲವು ನಿಷ್ಠಾವಂತ ಹೊಯ್ಸಳ ದಂಡನಾಯಕರಿಂದಾಗಿ ಎನ್ನಬಹುದು. ಅಲ್ಲದೆ ಇವನ ಆಳಿಕೆಯ ಉತ್ತರಾರ್ಧದಲ್ಲಿ ಮಗನಾದ ಎರಡನೆಯ ಬಲ್ಲಾಳ ಆಡಳಿತದಲ್ಲಿ ಪಾಲ್ಗೊಂಡಿದ್ದೂ ಕಾರಣವಾಗಿರಬಹುದು. ಶಕ್ತನಾದ ಬಲ್ಲಾಳ ತಂದೆಯ ನಿರ್ಬಲ ಆಡಳಿತವನ್ನು ಸಹಿಸದೆ ದಂಗೆಯೆದ್ದು 1173ರಲ್ಲಿ ತಾನೇ ಸಿಂಹಾಸನವನ್ನೇರಿದ.

ಎರಡನೆಯ ಬಲ್ಲಾಳ (1173-1220) ತನ್ನ ತಾತ ವಿಷ್ಣುವರ್ಧನನ ಗುರಿಯಾಗಿದ್ದ ಸಾಮ್ರಾಜ್ಯಸ್ಥಾಪನೆಯನ್ನು ಸಾಧಿಸುವ ಸಂಕಲ್ಪ ಮಾಡಿದ. ಅಧಿಕಾರಕ್ಕೆ ಬಂದಕೂಡಲೇ ರಾಜ್ಯದಲ್ಲಿ ತಲೆದೋರಿದ್ದ ಅರಾಜಕತೆಯನ್ನು ಹೋಗಲಾಡಿಸಿ ವಿಸ್ತರಣಾ ಕಾರ್ಯದಲ್ಲಿ ತೊಡಗಿದ. ವಿಷ್ಣುವರ್ಧನನ ಕಾಲದಲ್ಲಿ ಸಾಮಂತನಾಗಿ, ನರಸಿಂಹನ ಕಾಲದಲ್ಲಿ ಸ್ವತಂತ್ರನಾದ ಚೆಂಗಾಳ್ವ ರಾಜನನ್ನು ಹತ್ತಿಕ್ಕಿ (1173), 1177ರಲ್ಲಿ ಉಚ್ಚಂಗಿಯನ್ನು ಮುತ್ತಿ ಪಾಂಡ್ಯ ಕಾಮದೇವನನ್ನು ಸೋಲಿಸಿದ. ಅನಂತರ ಕಳಚುರಿಗಳ ಮೇಲೆ ಯುದ್ಧಮಾಡಿ ತುಂಗಭದ್ರಾನದಿಯ ಪ್ರದೇಶಗಳನ್ನು ವಶಪಡಿಸಿಕೊಂಡ. ಅದೇ ಸಮಯದಲ್ಲಿ ಸಿಂಧ ರಾಜನನ್ನೂ ಸಾಂತರರನ್ನೂ ಹಾನುಗಲ್ಲಿನ ಕದಂಬರನ್ನೂ ತುಳು ರಾಜನನ್ನೂ ಸೋಲಿಸಿದ. ಈ ವೇಳೆಗೆ ಚಾಳುಕ್ಯರ ಸಾಮಂತ ಪಕ್ಷವನ್ನು ವಹಿಸಿದ್ದ ಉಚ್ಚಂಗಿ ಕಾಮದೇವ ಪಾಂಡ್ಯನ ರಾಜ್ಯವನ್ನು ತನ್ನ ರಾಜ್ಯಕ್ಕೆ ಸೇರಿಸಿಕೊಂಡ (1187).

ಸೋಮೇಶ್ವರ ಪುನಃ ಚಾಳುಕ್ಯರ ಅಧಿಕಾರವನ್ನು ಸ್ಥಾಪಿಸಿದರೂ ಕುಂತಳ ಸಾಮ್ರಾಜ್ಯದ ಅವನತಿಯ ಕುರುಹುಗಳು ಕಾಣಬಂದದ್ದರಿಂದ ವೀರಬಲ್ಲಾಳ 1189ರಲ್ಲಿ ಕಲ್ಯಾಣಿಯ ವರೆಗೂ ದಂಡೆತ್ತಿಹೋಗಿ ಸೋಮೇಶ್ವರನ ಪ್ರಧಾನ ದಂಡನಾಯಕನಾದ ಬ್ರಹ್ಮದಂಡೇಶನನ್ನು ಸೋಲಿಸಿ ಚಾಳುಕ್ಯ ಸಾಮ್ರಾಜ್ಯದ ದಕ್ಷಿಣಭಾಗದ ಮೇಲೆ ತನ್ನ ಆಳಿಕೆಯನ್ನು ಸ್ಥಾಪಿಸಿ ಕರ್ನಾಟಕ ಚಕ್ರವರ್ತಿಯೆಂಬ ಬಿರುದು ಧರಿಸಿದ. ಅನಂತರ ಕುಂತಳ ಸಾಮ್ರಾಜ್ಯದ ಒಡೆತನಕ್ಕಾಗಿ ದೇವಗಿರಿಯ

ಸೇವುಣರಿಗೂ ಹೊಯ್ಸಳರಿಗೂ ಯುದ್ಧಗಳು ಪ್ರಾರಂಭವಾದುವು. ಸೇವುಣ ರಾಜನಾದ ಭಿಲ್ಲಮ ದಕ್ಷಿಣಕ್ಕೆ ಮುನ್ನುಗ್ಗಿದಾಗ ಬಲ್ಲಾಳ ಅವನನ್ನು ಸೊರಟೂರಿನ ಬಳಿಯಲ್ಲಿ ಎದುರಿಸಿ ಓಡಿಸಿದ (1190). ಸುತ್ತಲಿನ ಯಲಬುರ್ಗಿಯ ಸಿಂಧರೇ ಮೊದಲಾದ ಕಿರುದೊರೆಗಳನ್ನು ಜಯಿಸಿ ಹೊಯ್ಸಳ ರಾಜ್ಯವನ್ನು ಉತ್ತರದಲ್ಲಿ ಮಲಪ್ರಭಾ, ಕೃಷ್ಣಾನದಿಗಳ ವರೆಗೂ ವಿಸ್ತರಿಸಿದ. ತನ್ನ ಸಾಮ್ರಾಟ ಪದವಿಯ ಕುರುಹಾಗಿ 1192ರಲ್ಲಿ ತನ್ನ ಹೆಸರಿನಲ್ಲಿ ಶಕವೊಂದನ್ನು ಸ್ಥಾಪಿಸಿದ. 1173-92 ಬಲ್ಲಾಳನ ಆಳಿಕೆಯಲ್ಲಿ ನಿರಂತರ ಅಭಿವೃದ್ಧಿಯ ಕಾಲ. ಈ ಕಾಲದಲ್ಲಿ ಉತ್ತರ ಕರ್ನಾಟಕದ ರಾಜಕೀಯ ಶಕ್ತಿಗಳಾಗಿದ್ದ ಕಳಚುರಿಗಳು ಮತ್ತು ಚಾಳುಕ್ಯರು ಇತಿಹಾಸದಿಂದ ಮರೆಯಾದರಷ್ಟೆ. ಇದರಿಂದ ಅಲ್ಲಿ ಉದ್ಭವವಾದ ರಾಜಕೀಯ ಶೂನ್ಯತೆಯನ್ನು ಬಲ್ಲಾಳ ಚಾಕಚಕ್ಯತೆಯಿಂದ ತನಗೆ ಲಾಭದಾಯಕವಾಗಿ ಮಾಡಿಕೊಂಡ. ಆದರೆ ಅನಂತರದಲ್ಲಿ ಬಲ್ಲಾಳನ ಮುನ್ನಡೆ ಕುಂಠಿತವಾಯಿತು. ಮೊದಲಿಗೆ ಉತ್ತರ ಕರ್ನಾಟಕದ ಅನೇಕ ಚಿಕ್ಕ ರಾಜಮನೆತನಗಳೂ ಬಲ್ಲಾಳನಂತೆಯೇ ತತ್ಕಾಲದ ಸಾರ್ವಭೌಮ ಶೂನ್ಯತೆಯನ್ನು ಗಮನದಲ್ಲಿಟ್ಟು ಸ್ವಲಾಭನಿರತವಾಗಿದ್ದವು. ಹೊಸದಾಗಿ ಆ ಪ್ರದೇಶದಲ್ಲಿ ಕಾಲಿಟ್ಟಿದ್ದ ಬಲ್ಲಾಳನ ಸಾರ್ವಭೌಮತ್ವವನ್ನು ಸಹಿಸಲು ಒಪ್ಪಲಿಲ್ಲ. ಸಾಧ್ಯವಾದಷ್ಟುಮಟ್ಟಿಗೆ ಸ್ವತಂತ್ರ ರಾಜರಾಗಿರಲು ಅಲ್ಲಿಯ ಅರಸರು ಪ್ರಯತ್ನಿಸುತ್ತಿದ್ದರು. ಅಲ್ಲದೆ ದೇವಗಿರಿಯಲ್ಲಿ ಸಿಂಘಣ ಕ್ರಮೇಣ ಬಲಯುತನಾಗುತ್ತಿದ್ದ. ಬೆಳ್ವೊಲ, ಬನವಾಸಿ ಪ್ರಾಂತದಲ್ಲಿದ್ದ ಕೆಲವು ಚಿಕ್ಕ ರಾಜಮನೆತನಗಳಿಗೆ ಸಹಾಯ ಮಾಡುವ ನೆವದಲ್ಲಿ ದಕ್ಷಿಣ ದಂಡಯಾತ್ರೆಯನ್ನು ಕೈಕೊಂಡ. ಬೆಳ್ವೊಲ-ಬನವಾಸಿ ಪ್ರಾಂತದ ಆಧಿಪತ್ಯಕ್ಕಾಗಿ ದಖನ್ನಿನ ಎರಡು ಬಲಿಷ್ಠ ರಾಜರು ಪರಸ್ಪರ ವಿರುದ್ಧವಾಗಿ ನಿಂತರು. ಬಲ್ಲಾಳನಿಗೆ ಈ ಪರಿಸ್ಥಿತಿ ಅನುಕೂಲಕರವಾಗಿರಲಿಲ್ಲವಾಗಿ ತಾನು ಗಳಿಸಿದ ಉತ್ತರ ಕರ್ನಾಟಕದ ಭಾಗಗಳನ್ನು ಉಳಿಸಿಕೊಳ್ಳುವುದೇ ಪ್ರಯಾಸವಾಯಿತು. 1212ರ ವರೆಗೆ ಆ ನೆಲವನ್ನೆಲ್ಲ ಹಿಡಿತದಲ್ಲಿಟ್ಟು ಕೊಂಡಿದ್ದರೂ ಮುಂದೆ 1215ರ ಹೊತ್ತಿಗೆ ಸಿಂಘಣನ ಪ್ರಾಬಲ್ಯದಿಂದ ಬಲ್ಲಾಳ ತುಂಗಭದ್ರೆಯ ಉತ್ತರದ ಭಾಗವನ್ನೆಲ್ಲ ಕಳೆದುಕೊಂಡ. ಆದರೆ ಹೊಯ್ಸಳ ರಾಜ್ಯ ಭದ್ರವಾದ ಬುನಾದಿಯ ಮೇಲೆ ನಿಂತಿತ್ತು. ಸಿಂಘಣನಂಥ ಶೂರನ ಪ್ರಯತ್ನಗಳು, ಅದರ ಹೊರ ಎಲ್ಲೆಯನ್ನಷ್ಟೇ ಮುಟ್ಟಲು ಸಾಧ್ಯವಾಯಿತು.

ಈ ವೇಳೆಗೆ ಶಕ್ತಿಯುತವಾಗಿ ಬೆಳೆದಿದ್ದ ಹೊಯ್ಸಳ ರಾಜ್ಯಕ್ಕೆ ಹೊಸ ವಿಸ್ತರಣೆಯ ಅವಕಾಶಗಳು ಬೆಳೆದು ಬಂದುವು. ಈ ಹಿಂದೆಯೇ ರಕ್ತಸಂಬಂಧವನ್ನು ಬೆಳೆಸಿದ್ದ ಚೋಳರೊಡನೆ ರಾಜಕೀಯ ಸಂಬಂಧವನ್ನು ಬೆಳೆಸಲಾಯಿತು. ಮೂರನೆಯ ಕುಲೋತ್ತುಂಗ ಚೋಳ ತನ್ನ ಸಾಮಂತ ರಾದ ಪಾಂಡ್ಯರಿಂದ ಪರಾಜಿತನಾದಾಗ, ಬಲ್ಲಾಳನ ಸಹಾಯವನ್ನು ಯಾಚಿಸಿದ. ಬಲ್ಲಾಳ ತನ್ನ ಕುಮಾರ ಎರಡನೆಯ ನರಸಿಂಹನ ನೇತೃತ್ವದಲ್ಲಿ ಹೊಯ್ಸಳ ಸೈನ್ಯವನ್ನು ಕುಲೋತ್ತುಂಗನ ಸಹಾಯಕ್ಕೆ ಕಳುಹಿಸಿದ. ನರಸಿಂಹ ರಾಜರಾಜನ ಶತ್ರುಗಳನ್ನು ಸೋಲಿಸಿ ಅವನನ್ನು ಚೋಳ ಸಿಂಹಾಸನದ ಮೇಲೆ ಕೂರಿಸಿದ. ಇದರಿಂದ ತಮಿಳುನಾಡಿನ ರಾಜಕೀಯದಲ್ಲಿ ಹೊಯ್ಸಳರ ಕೈವಾಡದ ನಾಂದಿಯಾಯಿತು. ಪಾಂಡ್ಯರಾಜ ಗಜಕೇಸರಿ, ಚೋಳರಾಜಪ್ರತಿಷ್ಠಾಪನಾಚಾರ್ಯ ಎಂಬ ಬಿರುದುಗಳನ್ನು ಬಲ್ಲಾಳ ಧರಿಸಿದ. ಇಮ್ಮಡಿ ವೀರಬಲ್ಲಾಳ ಹೊಯ್ಸಳ ಸಂತತಿಯ ಸಾಮ್ರಾಟರಲ್ಲೆಲ್ಲ ಅತ್ಯಂತ ಪರಾಕ್ರಮಿ. ಒಂದನೇ ನರಸಿಂಹನ ಕಾಲದಲ್ಲಿ ಮುದುರಿಹೋಗಿದ್ದ ಹೊಯ್ಸಳ ರಾಜ್ಯವನ್ನು ತನ್ನ ಬಾಹುಬಲಸಾಮರ್ಥ್ಯ ಹಾಗೂ ದೂರದೃಷ್ಟಿಯಿಂದ ವಿಸ್ತರಿಸಿ, ದಕ್ಷಿಣ ಭಾರತದ ರಾಜಕೀಯದಲ್ಲಿ ಹೊಯ್ಸಳ ವಂಶವನ್ನು ಒಂದು ಮುಖ್ಯ ಶಕ್ತಿಯಾಗಿ ರೂಪಿಸಿದ ಕೀರ್ತಿ ಈತನದು.

ಇವನ ಮಗ ಎರಡನೆಯ ನರಸಿಂಹನ (1220-35) ಕಾಲದಲ್ಲಿ ಈ ಹಿಂದೆ ಬಲ್ಲಾಳ ಸ್ಥಾಪಿಸಿದ್ದ ಸಾಮ್ರಾಜ್ಯ ಭದ್ರಪಟ್ಟುದಲ್ಲದೆ ಅಂದು ತಮಿಳುನಾಡಿನಲ್ಲಿ ಆಳುತ್ತಿದ್ದ ಚೋಳರು ಬಹಳ ಬಲಹೀನರಾಗಿ, ಪಾಂಡ್ಯರೇ ಮೊದಲಾದವರಿಂದ ಪೀಡಿತರಾಗಿದ್ದು, ಹಲವು ಸಂದರ್ಭಗ ಳಲ್ಲಿ ರಾಜ್ಯವನ್ನೂ ಕಳೆದುಕೊಂಡಿದ್ದರು. ಬಲ್ಲಾಳನ ಕಾಲದಿಂದಲೂ ಬೆಳೆದುಬಂದಿದ್ದ ಚೋಳ-ಹೊಯ್ಸಳ ರಕ್ತಸಂಬಂಧ ಮತ್ತು ತತ್ಕಾಲೀನ ತಮಿಳುನಾಡಿನ ಅಸ್ತವ್ಯಸ್ತ ಸ್ಥಿತಿಯನ್ನು ಚಾಕಚಕ್ಯತೆಯಿಂದ, ಬಳಸಿಕೊಂಡ ನರಸಿಂಹ, ಹಲವು ಬಾರಿ ತಮಿಳುನಾಡಿಗೆ ನುಗ್ಗಿ ಚೋಳವೈರಿಗಳನ್ನು ಸದೆ ಬಡಿದು ಚೋಳರಿಗೆ ರಾಜ್ಯ ದಕ್ಕಿಸಿಕೊಟ್ಟ. ಚೋಳರು ಕೃತಜ್ಞತೆಯಿಂದ ಪ್ರಾಯಶಃ ನರಸಿಂಹನ ರಾಜಕೀಯ ಚಾತುರ್ಯದಿಂದಲೂ ಇರಬಹುದು, ತಮಿಳುನಾಡಿನ ಕೊಯಮತ್ತೂರು, ತಿರುಚ್ಚಿರಾಪಳ್ಳಿ ಜಿಲ್ಲೆಯ ಹಲವು ಭಾಗಗಳನ್ನು ಹೊಯ್ಸಳರಿಗೆ ವಹಿಸಿಕೊಟ್ಟರು. ಇದರಿಂದಾಗಿ ನರಸಿಂಹನ ಕಾಲದಲ್ಲಿ ಹೊಯ್ಸಳ ರಾಜ್ಯ ತಮಿಳುನಾಡಿಗೂ ವಿಸ್ತರಿಸಿತು. ಇತ್ತ ರಾಜ್ಯವಿಸ್ತರಣೆಯಾದರೂ ಉತ್ತರದಲ್ಲಿ ಸೇವುಣರ ದಾಳಿಗಳು ಮುಂದುವರಿಯುತ್ತಲೇ ಇದ್ದುವು. ಆದರೂ ರಾಜ್ಯದ ಉತ್ತರ ದಕ್ಷಿಣದ ಎರಡು ಕಡೆಗಳಲ್ಲೂ ಸೈನ್ಯಾಚರಣೆಯಲ್ಲಿ ನಿರತನಾಗಿ ಹೊಯ್ಸಳ ರಾಜ್ಯವನ್ನು ಗಟ್ಟಿಯಾಗಿ ಉಳಿಸಿದ್ದಲ್ಲದೆ ದಕ್ಷಿಣದಲ್ಲಿ ವಿಸ್ತರಿಸಿದ್ದು ಎರಡನೆಯ ನರಸಿಂಹನ ಮುಖ್ಯ ಸಾಧನೆ. ಈ ಕಾಲದಿಂದ ಹೊಯ್ಸಳ ಪ್ರಭಾವ ತಮಿಳುನಾಡಿನಲ್ಲಿ ಭದ್ರವಾಗಿ ನೆಲೆಯೂರಿದ್ದೂ ಗಮನಾರ್ಹ ಅಂಶ.

ನರಸಿಂಹನ ಮಗ ಸೋಮೇಶ್ವರ (1235-53) ತತ್ಕಾಲೀನ ರಾಜಕೀಯ ದಲ್ಲಿ ಹೇಳಿಕೊಳ್ಳುವ ಚಾಕಚಕ್ಯತೆಯನ್ನೇನೂ ತೋರಿಸಲಿಲ್ಲ. ಇವನು ಹೆಚ್ಚಾಗಿ ತಮಿಳುನಾಡಿನಲ್ಲೇ ಇರುತ್ತಿದ್ದುದರಿಂದ ಹೊಯ್ಸಳ ರಾಜ್ಯದ ಉತ್ತರದಲ್ಲಿ ಸೇವುಣರು ಸಾಕಷ್ಟು ಬಲಸಂವರ್ಧನೆ ಮಾಡಿಕೊಂಡಂತೆ ತೋರುತ್ತದೆ. ಆದರೆ ಹೊಯ್ಸಳ ರಾಜ್ಯಕ್ಕೇನೂ ಹೆಚ್ಚು ಧಕ್ಕೆಯಾಗಲಿಲ್ಲ. ಲಾಭವಂತೂ ಸಾಧ್ಯವೇ ಇರಲಿಲ್ಲ. ತಮಿಳುನಾಡಿನಲ್ಲಿ ಅಂದಿನ ರಾಜಕೀಯ ಸಮತೋಲ ಅಸ್ತವ್ಯಸ್ತವಾದ್ದರಿಂದ ಹಲವು ಯುದ್ಧಗಳಲ್ಲಿ ಈತ ಭಾಗವಹಿಸಬೇಕಾಯಿತು. ಇವನು ಚೋಳರೊಡನೆಯೇ ಅಲ್ಲದೆ ಅವರ ವೈರಿಗಳಾಗಿದ್ದ ಪಾಂಡ್ಯರೊಡನೆಯೂ ರಕ್ತಸಂಬಂಧ ಬೆಳೆಸಿದ್ದ; ಈ ಎರಡು ವಂಶದವರ ಶಾಸನಗಳೂ ಸೋಮೇಶ್ವರನನ್ನು ಮಾವ ಎಂದು ಹೆಸರಿಸುತ್ತವೆ. ಆದರೆ ಇದನ್ನೇ ಲಾಭ ಮಾಡಿಕೊಂಡ ಸೋಮೇಶ್ವರ, ಇಬ್ಬರಲ್ಲಿ ಯುದ್ಧವಾದಾಗ ಯಾವ ಒಂದು ಕಡೆಗೂ ಒಲವು ತೋರಿಸದೆ, ಇಬ್ಬರನ್ನೂ ನಿಗ್ರಹಿಸಿ ಹೊಯ್ಸಳ ಪ್ರಭಾವವನ್ನು ತಮಿಳುನಾಡಿನಲ್ಲೆಲ್ಲ ಹರಡಿ ಆ ದೇಶದ ಪ್ರಬಲಶಕ್ತಿಯಾದದ್ದು ಇವನ ಮುಖ್ಯ ಸಾಧನೆ. ಈ ಕಾಲದಲ್ಲಿ ಹೊಯ್ಸಳ ರಾಜ್ಯ ಬಹು ವಿಸ್ತಾರವಾಗಿದ್ದುದರಿಂದಲೂ ಇವನ ಮಕ್ಕಳಾದ 3ನೆಯ ನರಸಿಂಹ ಮತ್ತು ವೀರ ರಾಮನಾಥರಲ್ಲಿ ಸಾಮರಸ್ಯವಿಲ್ಲದ್ದರಿಂದಲೂ ಸೋಮೇಶ್ವರ ತನ್ನ ಆಳಿಕೆಯ ಕಡೆಯ ಭಾಗದಲ್ಲಿ ರಾಜ್ಯವನ್ನು ಇಬ್ಭಾಗ ಮಾಡಿ ಮಕ್ಕಳಲ್ಲಿ ಹಂಚಿದ.

ಹೊಯ್ಸಳ ರಾಜ್ಯದ ಕರ್ನಾಟಕ ಭಾಗವನ್ನು ಆಳುತ್ತಿದ್ದ 3ನೆಯ ನರಸಿಂಹನ (1253-92) ಕಾಲದಲ್ಲಿ ಇವನಿಗೂ ಇವನ ಮಲತಮ್ಮನಾದ ವೀರರಾಮನಾಥನಿಗೂ ನಡೆದ ದಾಯಾದಿ ಕಲಹಗಳಷ್ಟೇ ಪ್ರಮುಖವಾಗಿ ಕಂಡುಬರುತ್ತವೆ. ಹಲವು ಬಾರಿ ಸೇವುಣ ರಾಮಚಂದ್ರ ಮತ್ತು ಮಹಾದೇವ ಹೊಯ್ಸಳ ರಾಜ್ಯವನ್ನು ಕಬಳಿಸಲು ಪ್ರಯತ್ನಿಸಿದರಾದರೂ ಸಫಲರಾಗಲಿಲ್ಲ.

ಅತ್ತ ವಿಕ್ರಮಪುರದಿಂದ ಹೊಯ್ಸಳ ರಾಜ್ಯದ ತಮಿಳು ಭಾಗಗಳನ್ನು ಆಳುತ್ತಿದ್ದ ವೀರರಾಮನಾಥನಾದರೋ(1253-95) ತನ್ನ ಆಳಿಕೆಯ ಪ್ರಾರಂಭದಲ್ಲೇ ಮಧುರೆಯ ಜಟಾವರ್ಮನ್ ಸುಂದರಪಾಂಡ್ಯನಿಂದ ಪರಾಜಿತನಾಗಿ ತನ್ನ ರಾಜ್ಯದ ಹೆಚ್ಚು ಪ್ರದೇಶಗಳನ್ನು ಕಳೆದುಕೊಂಡು ಹೊಸೂರು ಬಳಿಯ ಕುಂದಾಣಿಯನ್ನು ರಾಜಧಾನಿಯಾಗಿ ಮಾಡಿಕೊಂಡ. ತನ್ನ ಸಹೋದರ ನರಸಿಂಹನಿಗೆ ಸೇರಿದ ಪ್ರದೇಶಗಳನ್ನು ಅನೇಕ ವೇಳೆ ಮುತ್ತುವುದಷ್ಟೇ ಆತ ಜೀವನಪರ್ಯಂತ ನಡೆಸಿದ ಕೆಲಸ. ರಾಮನಾಥ ಮತ್ತು ನರಸಿಂಹರ ಕಾಲದಲ್ಲಿ ಹೊಯ್ಸಳರು ತಮಿಳುನಾಡಿನ ಮೇಲೆ ಹೊಂದಿದ್ದ ಪ್ರಭುತ್ವಕ್ಕೆ ಚ್ಯುತಿ ಬಂದಿತು.

ಮೂರನೆಯ ನರಸಿಂಹನ ಮಗ ಮೂರನೆಯ ಬಲ್ಲಾಳನ (1292-1343) ಆಳಿಕೆಯ ಮೊದಲೆರಡು ದಶಕಗಳು ಆಶಾದಾಯಕವಾಗಿದ್ದುವು. ಈತ ಪಟ್ಟಕ್ಕೆ ಬಂದ ಕೂಡಲೇ ದಾಯಾದಿ ಕಲಹದಿಂದ ಅಧೋಗತಿಗೆ ಇಳಿದಿದ್ದ ರಾಜ್ಯವನ್ನು ಸುಭದ್ರಸ್ಥಿತಿಗೆ ತರಲು ಯತ್ನಿಸಿದ. 1301ರ ವೇಳೆಗೆ ರಾಮನಾಥನ ಆಡಳಿತದಲ್ಲಿ ಇದ್ದ ಪ್ರದೇಶಗಳನ್ನು ಪೂರ್ಣವಾಗಿ ವಶಪಡಿಸಿಕೊಂಡು ಹೋಳಾಗಿದ್ದ ರಾಜ್ಯವನ್ನು ಒಂದುಗೂಡಿಸಿದ. 1302ರ ಹೊತ್ತಿಗೆ ಸೇವುಣರ ಮೇಲೂ ಯುದ್ಧಹೂಡಿ ರಾಜ್ಯದ ಉತ್ತರದ ಗಡಿಯನ್ನು ಭದ್ರಪಡಿಸಿ, ಹೊಯ್ಸಳ ರಾಜ್ಯದ ಹಿಂದಿನ ಪ್ರಭಾವೀಸ್ಥಿತಿಯನ್ನು ಸಾಧಿಸಿದ. ಆದರೆ ಬಲ್ಲಾಳನ ಕಾಲ ದಕ್ಷಿಣ ಭಾರತದ ಇತಿಹಾಸದಲ್ಲಿ ಸಂದಿಗ್ಧಕಾಲ. ಅತ್ತ ಉತ್ತರ ಭಾರತದಲ್ಲಿ ಮುಸಲ್ಮಾನ ಅರಸರು ಪ್ರಬಲರಾಗಿ ದಕ್ಷಿಣ ಭಾರತದ ಮೇಲೂ ಕಣ್ಣು ಹಾಯಿಸುವ ಸ್ಥಿತಿಗೇರಿದ್ದರು.

1310ರ ವೇಳೆಗೆ ಅಲಾಉದ್ದೀನ್‌ನ ಅಪ್ಪಣೆಯ ಮೇರೆಗೆ ಅವನ ದಂಡನಾಯಕನಾದ ಮಲ್ಲಿಕ್ ಕಾಫರ್ ದೇವಗಿರಿಯ ಸೇವುಣರನ್ನು ಸೋಲಿಸಿ ಕರ್ನಾಟಕ ಮತ್ತು ತಮಿಳುನಾಡುಗಳನ್ನು ಜಯಿಸಿ ಅಪರಿಮಿತ ಐಶ್ವರ್ಯವನ್ನು ದೋಚುವುದಕ್ಕಾಗಿ ದೋರಸಮುದ್ರದತ್ತ ಮುಂದುವರಿದ. ಇವನು ಹೊಯ್ಸಳ ರಾಜ್ಯದ ಗಡಿಗಳನ್ನು ಪ್ರವೇಶಿಸುತ್ತಿದ್ದ ಸಮಯದಲ್ಲಿ ಬಲ್ಲಾಳ ತಮಿಳುನಾಡಿನಲ್ಲಿ ತನ್ನ ಪ್ರಭಾವ ಸ್ಥಾಪಿಸುವ ಯತ್ನದಲ್ಲಿದ್ದ. ಹಲವು ಭಾಗಗಳು ಶತ್ರುಗಳ ದಾಳಿಗೆ ಸಿಕ್ಕಿ ಪಾಳುಬಿದ್ದವು. ಬಲ್ಲಾಳ ಈ ವಿಷಮ ಪರಿಸ್ಥಿತಿಯಿಂದ ಪಾರಾಗಲು ಕಾಫರನಿಗೆ ವಿಶೇಷ ಐಶ್ವರ್ಯವನ್ನು ನೀಡಿ ಒಪ್ಪಂದ ಮಾಡಿಕೊಂಡ. ಮಹಮ್ಮದೀಯ ದಾಳಿ ಕೇವಲ ಆಕಸ್ಮಿಕವೆಂದು ಭಾವಿಸಿದ್ದ ಬಲ್ಲಾಳ ಪುನಃ ಹಳೆಯ ರಾಜಕೀಯ ಅಂತರ್ಯುದ್ಧಗಳಲ್ಲಿ ತೊಡಗಿದ. ತಮಿಳುನಾಡಿನಲ್ಲಿ ಪಾಂಡ್ಯವಂಶದ ಈರ್ವರು ಅಧಿಕಾರಕ್ಕಾಗಿ ಕಚ್ಚಾಡುತ್ತಿದ್ದಾಗ, ಒಬ್ಬನಿಗೆ ಬೆಂಬಲ ನೀಡಿ ಅವನಿಗೆ ರಾಜ್ಯ ದಕ್ಕಿಸಿಕೊಟ್ಟು, ಈ ಸಂದರ್ಭದಲ್ಲಿ ತಿರುವಣ್ಣಾಮಲೈ ಮತ್ತು ಸುತ್ತಲಿನ ಪ್ರದೇಶಗಳನ್ನು ಹೊಯ್ಸಳ ರಾಜ್ಯಕ್ಕೆ ಸೇರಿಸಿಕೊಂಡ. ಆದರೆ ಮಹಮ್ಮದೀಯರ ಉತ್ಕರ್ಷವನ್ನು ಗಮನಿಸಿ ದಕ್ಷಿಣ ಭಾರತದ ತಮ್ಮ ಆಳಿಕೆಯನ್ನು ಭದ್ರಪಡಿಸಿಕೊಳ್ಳಲು ಒಟ್ಟುಗೂಡಿ ಸತತ ಪ್ರಯತ್ನವನ್ನು ನಡೆಸಬೇಕಾಗಿದ್ದ ಈ ಕಾಲದಲ್ಲಿ ಅಂತರ್ಯುದ್ಧದಲ್ಲಿ ತೊಡಗಿ ಎಲ್ಲರೂ ಬಲಹೀನರಾಗುತ್ತಿದ್ದುದು ಮುಂದಿನ ರಾಜಕೀಯ ದುರಂತಕ್ಕೆ ದಾರಿಯಾಯಿತು. 1325ರಲ್ಲಿ ಪುನಃ ಉತ್ತರದಿಂದ ಉಪದ್ರವ ತಲೆದೋರಿತು. ಆ ವೇಳೆಗೆ ದೆಹಲಿಯ ಸುಲ್ತಾನನಾಗಿದ್ದ ಮಹಮ್ಮದ್ ಬಿನ್ ತುಗಲಕ್ ದಖಿನ್ ಪ್ರಸ್ಥಭೂಮಿಯವರೆಗೂ ರಾಜ್ಯ ವಿಸ್ತರಿಸಿದ್ದ. ತನ್ನ ವಿರುದ್ಧ ದಂಗೆಯೆದ್ದ ಬಹಾಉದ್ದೀನ್ ಗುರ್ಶಸ್ಪ್‌ನನ್ನು ಸೆರೆಹಿಡಿಯಲು ಮಹಮ್ಮದ್ ಬಿನ್ ತುಗಲಕ್ ಕಳುಹಿಸಿದ ಸೈನ್ಯದಿಂದ ಓರಂಗಲ್ ಮತ್ತು ಕಂಪಿಲಿಯ ರಾಜಮನೆತನಗಳು

ನಿರ್ನಾಮವಾದುವು. ಇದರಿಂದ ಹೊಯ್ಸಳರ ಆಶ್ರಯ ಕೋರಿ ಬಂದಿದ್ದ ಬಹಾಉದ್ದೀನನನ್ನು ಮಹಮ್ಮದ್ ಬಿನ್ ತುಗಲಕನ ಸೈನ್ಯಕ್ಕೆ ಒಪ್ಪಿಸಿ ವೀರಬಲ್ಲಾಳ ಮಹಮದೀಯರ ಆಕ್ರಮಣದಿಂದ ತನ್ನ ರಾಜ್ಯವನ್ನು ಪಾರುಮಾಡಿದ.

ಅನಂತರ ಬಲ್ಲಾಳ ಮಹಮ್ಮದೀಯ ರಾಜ್ಯಗಳ ನಿಜಶಕ್ತಿಯನ್ನು ಅರಿತಂತೆ ತೋರುತ್ತದೆ. ಇದರಿಂದ ಎಚ್ಚೆತ್ತ ಅವನು ತನ್ನ ರಾಜ್ಯದ ಗಡಿಗಳಲ್ಲಿ ಉಪರಾಜಧಾನಿಗಳನ್ನು ಸ್ಥಾಪಿಸಿ ರಕ್ಷಣೆಗಾಗಿ ಸೈನ್ಯದ ತುಕಡಿಗಳನ್ನು ನೇಮಿಸಿದ. ಇವನು ಶಕ್ತಿಯುತನಾಗಿ ಪಶ್ಚಿಮ-ಪೂರ್ವ ಸಮುದ್ರ ಪರ್ಯಂತ ರಾಜ್ಯವನ್ನು ಅನುಭವಿಸುತ್ತಿದ್ದರೂ ಉತ್ತರದಲ್ಲಿ ದೇವಗಿರಿಯಲ್ಲೂ ದಕ್ಷಿಣದಲ್ಲಿ ಮಧುರೆಯಲ್ಲೂ ಮುಸಲ್ಮಾನ ರಾಜ್ಯಗಳು ನೆಲೆಗೊಂಡಿದ್ದುವು. ಬಲ್ಲಾಳ ಉತ್ತರದಿಂದ ಬಂದ ಈ ಹೊಸ ರಾಜಕೀಯ ಶಕ್ತಿಯನ್ನು ಎದುರಿಸಲು ಇಲ್ಲಿ ಉಳಿದಿದ್ದ ಏಕೈಕ ರಾಜನಾಗಿದ್ದ. ಆದರೆ ಕಾಲಕ್ಕೆ ತಕ್ಕ ಹೊಸ ರಾಜನೀತಿಯನ್ನು ರೂಪಿಸಿಕೊಳ್ಳುವ ಇವನ ಕ್ರಮ ಬಹು ತಡವಾಗಿ ಹುಟ್ಟಿತು.

ಬಲ್ಲಾಳ ಅಪರಿಮಿತ ಸೈನ್ಯದೊಡನೆ 1342ರಲ್ಲಿ ತಮಿಳುನಾಡಿಗೆ ಹೋದ. ಕೊಪ್ಪಂ ಕಣ್ಣಾನೂರಿನ ಬಳಿಯಲ್ಲಿ ಮಧುರೆಯ ಸುಲ್ತಾನನ ಸೈನ್ಯಕ್ಕೂ ಹೊಯ್ಸಳ ಸೈನ್ಯಕ್ಕೂ ಕದನ ನಡೆದು ಮಹಮ್ಮದೀಯ ಸೈನ್ಯ ಸೋಲನ್ನು ಅನುಭವಿಸಿದರೂ ಶತ್ರುಗಳ ಕುತಂತ್ರದಿಂದ ಬಲ್ಲಾಳ ಅವರ ಸೆರೆಯಾದ, ಕೊನೆಗೆ ಬಲಿಯಾದ (1343). ಅಲ್ಲಿಗೆ ಹೊಯ್ಸಳ ಸಾಮ್ರಾಜ್ಯ ಅಸ್ತಂಗತವಾದಂತಾಯಿತು.

ಇವನ ಮಗ ವಿರೂಪಾಕ್ಷ ಪಟ್ಟವೇರಿದರೂ ತನ್ನ ನಿರ್ಬಲತೆಯಿಂದಾಗಿ ಕೆಲವೇ ವರ್ಷಗಳಲ್ಲಿ ರಾಜಕೀಯದಿಂದ ಕಣ್ಮರೆಯಾದ. ಆದರೆ ಮೂರನೆಯ ಬಲ್ಲಾಳ ತನ್ನ ಆಳಿಕೆಯ ಕೊನೆಯ ಭಾಗದಲ್ಲಿ ದಕ್ಷಿಣದಲ್ಲಿ ಹಿಂದು ರಾಜ್ಯವನ್ನು ಸ್ಥಾಪಿಸಲು ಹೊಂದಿದ್ದ ಉದ್ದೇಶದ ಬೀಜ ಬಲವಾಗಿ ಬೇರೂರಿ 1336ರಲ್ಲಿ ಹುಟ್ಟಿದ ವಿಜಯನಗರ ಸಾಮ್ರಾಜ್ಯದಲ್ಲಿ ಫಲ ನೀಡಿತು.

(-*-*-*-*-)